UNIVERSITY LIBRARY
Agri Newspaper Clippings
Tuesday 24-02-2026
For more information visit University Library Website
Web - uasbagrilibindia.org
E-mail- librarian@uasbangalore.edu.in

ರೈತ ಮಿತ್ರ



■ ಬೇಸಿಗೆಯಲ್ಲಿ ಜಾನುವಾರುಗಳಿಗೆ ಒಣ ಮೇವು ನೀಡುತ್ತಿದ್ದು, ಇದನ್ನು ಪೌಷ್ಟೀಕರಿಸುವುದು ಹೇಗೆ?

। ವೆಂಕಟಾಚಲಪತಿ ಕೋಲಾರ

ಬೇಸಿಗೆಯಲ್ಲಿ ಸಾಮಾನ್ಯವಾಗಿ ಹಲವು ರೈತರಿಗೆ ನೀರಾವರಿ ಸೌಲಭ್ಯ ಇಲ್ಲದ ಕಾರಣ ಹಸಿರು ಮೇವು ಪೂರೈಸುವುದು ಕಷ್ಟ. ಇಂತಹ ಸಂದರ್ಭದಲ್ಲಿ ಒಣ ಮೇವನ್ನು ನೀಡಲಾಗುವುದು. ಒಣ ಮೇವಿನಲ್ಲಿ ಜಾನುವಾರುಗಳಿಗೆ ಅವಶ್ಯಕ ಪೋಷಕಾಂಶಗಳು ಇರುವುದಿಲ್ಲ. ಆದ್ದರಿಂದ ಪೌಷ್ಟೀಕರಿಸುವುದು ಉತ್ತಮ ವಿಧಾನವಾಗಿದೆ.

ಪೌಷ್ಟೀಕರಿಸುವ ವಿಧಾನ: 20 ಲೀಟರ್ ನೀರಿನಲ್ಲಿ 2.0 ಕಿ.ಗ್ರಾಂ ಯೂರಿಯಾ ಮತ್ತು 4.0 ಕಿ.ಗ್ರಾಂ ಬೆಲ್ಲ/ಕಾಕಂಬಿ ಮಿಶ್ರಣ ಮಾಡುವುದು. ಈ ಮಿಶ್ರಣವನ್ನು 100 ಕಿ.ಗ್ರಾಂ ಒಣ ಮೇವಿನ ಮೇಲೆ ಸಿಂಪಡಣೆ ಮಾಡಿ ನೆರವಾಗಿ ಜಾನುವಾರುಗಳಿಗೆ ನೀಡುವುದು. ಪೌಷ್ಟೀಕರಿಸಿದ ಒಣಮೇವಿನ ಪೋಷಕಾಂಶಗಳು ಹಸಿರು ಮೇವಿನ ಪೋಷಕಾಂಶಗಳಿಗೆ ಬಹುತೇಕ ಸಮವಾಗಿರುತ್ತವೆ. ಇದರಿಂದಾಗಿ ಬೇಸಿಗೆಯಲ್ಲೂ ಜಾನುವಾರುಗಳು ಉತ್ತಮ ಗುಣಮಟ್ಟದ ಹಾಲು ಉತ್ಪಾದಿಸುತ್ತವೆ. ಸೂಚಿಸಿದ ಪ್ರಮಾಣಕ್ಕಿಂತ ಹೆಚ್ಚಿನ ಯೂರಿಯಾ ಸಿಂಪಡಿಸುವುದು ಹಾನಿಕಾರಕ.

। ಡಾ. ಕೆ.ಪಿ.ರಘುಪ್ರಸಾದ್ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

Vijayavani Pg.7

ಫೆ.28ರಂದು ಜಿಲ್ಲಾಮಟ್ಟದ ಸಿರಿಧಾನ್ಯ ಹಬ್ಬ

ದೊಡ್ಡಬಳ್ಳಾಪುರ: ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೃಷಿ ಇಲಾಖೆಯಿಂದ ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ-2026ರ ಅಂಗವಾಗಿ ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆಯನ್ನು ಫೆಬ್ರವರಿ 28ರಂದು ಬೆಳಗ್ಗೆ 10.30 ಗಂಟೆಗೆ ತಾಲೂಕಿನ ಮೆಳೇಕೋಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲೆಯ ಆಸಕ್ತ ರೈತರು ಹಾಗೂ ಸಾರ್ವಜನಿಕರು ಭಾಗವಹಿಸಲು ನೋಂದಣಿಗಾಗಿ ಫೆ. 26ರ ಮಧ್ಯಾಹ್ನ 3ಗಂಟೆಯೊಳಗಾಗಿ ಆಯಾ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ನಿಗದಿತ ನಮೂನೆ ಅರ್ಜಿ ಪಡೆದು ಭರ್ತಿ ಮಾಡಿ ತಮ್ಮ ಭಾವಚಿತ್ರದೊಂದಿಗೆ ಮಾಹಿತಿಯನ್ನು ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಅರ್ಜಿ ನಮೂನೆ ಸಲ್ಲಿಸಬಹುದು.

ಪ್ರತಿ ಸ್ಪರ್ಧೆಗೆ ಒಂದೇ ತಿನಿಸು ಮಾಡಲು (ಸ್ವಯಂಹಾರಿ ಸಿರಿಧಾನ್ಯ ತಿನಿಸುಗಳಿಗೆ ಮಾತ್ರ) ಸಿಹಿ, ಖಾರ ಮತ್ತು ಮರೆತು ಹೋದ ಖಾದ್ಯಗಳ ತಿನಿಸು ಮಾಡಲು ಅವಕಾಶವಿದೆ. ವಿದ್ಯಾರ್ಥಿಗಳು, ಇಲಾಖಾ ಅಧಿಕಾರಿಗಳು, ಸಿಬ್ಬಂದಿ ಮತ್ತು ಅಧಿಕೃತ ತರಬೇತಿ, ಪದವಿ, ಶಿಕ್ಷಣ ಪಡೆದವರನ್ನು ಹೊರತುಪಡಿಸಿ ಜಿಲ್ಲೆಯ ರೈತರು ಹಾಗೂ ಸಾರ್ವಜನಿಕರು ಸ್ಪರ್ಧಿಸಬಹುದಾಗಿದೆ.

ಮನೆಯಲ್ಲಿಯೇ ತಯಾರಿಸಿದ ಸಿರಿಧಾನ್ಯದ ಖಾದ್ಯ ಪ್ರದರ್ಶಿಸುವುದಕ್ಕೆ ಬಳಸುವ ಸಾಮಗ್ರಿಗಳ ಮಾದರಿಯನ್ನು



ಕಡ್ಡಾಯವಾಗಿ ಪ್ರದರ್ಶಿಸಬೇಕು. ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಒಂದು ಸಿಹಿ, ಖಾರ ಸಿರಿಧಾನ್ಯ ಖಾದ್ಯಗಳಿಗೆ ಮಾತ್ರ ಮತ್ತು ಮರೆತುಹೋದ ಖಾದ್ಯಗಳ ತಿನಿಸನ್ನು ಆಯ್ಕೆ ಮಾಡಲಾಗುತ್ತದೆ.

ಜಿಲ್ಲಾ ಮಟ್ಟದ ಪ್ರಥಮ ಸ್ಥಾನಕ್ಕೆ ಸಿಹಿ, ಖಾರದ ತಿನಿಸು (ಸಿರಿಧಾನ್ಯ ಖಾದ್ಯಗಳಿಗೆ ಮಾತ್ರ) ಅಥವಾ ಮರೆತುಹೋದ ಖಾದ್ಯದ ತಿನಿಸುಗಳಿಗೆ ತಲಾ ರೂ. 5000, ದ್ವಿತೀಯ ಸ್ಥಾನಕ್ಕೆ ರೂ.3000, ತೃತೀಯ ಸ್ಥಾನಕ್ಕೆ ರೂ. 2000ಯನ್ನು ಬಹುಮಾನ ನೀಡಲಾಗುತ್ತದೆ. ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ ಅಥವಾ ಆಯಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಬಿ.ಜಿ. ಕಲಾವತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Hosadigantha Pg.10

ಡಿಜಿಟಲೀಕರಣದಿಂದ ಶಿಕ್ಷಣ ಕ್ಷೇತ್ರಕ್ಕೆ ಹೊಸ ದಿಕ್ಕು

ಗೆಹಲೋತ್ ಅಭಿಮತ। ವಿಎಪಿಎಸ್ ಟಿಕ್ಕೋನೆಸಾಫ್ಟ್ ರಜತ ಮಹೋತ್ಸವ

ಸಂ.ಕ.ಸಮಾಚಾರ, ಬೆಂಗಳೂರು

ಕರ್ನಾಟಕ ತಂತ್ರಜ್ಞಾನ ಮತ್ತು ಡಿಜಿಟಲ್ ಪರಿಸರ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಗಮನಾರ್ಹ ಕೊಡುಗೆಯನ್ನು ಕೊಂದಿದೆ ಮತ್ತು ಮಾಹಿತಿ ತಂತ್ರಜ್ಞಾನ, ಸಕ್ರಿಯ ಸೇವೆಗಳು, ಎಲೆಕ್ಟ್ರಾನಿಕ್ಸ್ ಯಂತ್ರೋಪಕರಣಗಳು, ಏರೋಸ್ಪೇಸ್ ಮತ್ತು ಜೈವಿಕ ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಹೇಳಿದರು.

ಸೋಮವಾರ ನಗರದ ಜಿಕೆವಿಕೆ ಸಭಾಂಗಣದಲ್ಲಿ ಆಯೋಜಿಸಿದ್ದ ವಿಎಪಿಎಸ್ ಟಿಕ್ಕೋನೆಸಾಫ್ಟ್ ಪ್ರೈವೇಟ್ ಲಿಮಿಟೆಡ್. ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ಸಂಸ್ಥೆಯು 25 ವರ್ಷಗಳು ನಿರಂತರ ಕಠಿಣ ಪರಿಶ್ರಮ, ನಾವೀನ್ಯತೆ, ಗುಣಮಟ್ಟ ಮತ್ತು ನಂಬಿಕೆಯ ಸಂಕೇತವಾಗಿದೆ. ಅಭಿನಂದನೆಗಳು ಎಂದರು.



ಶಿಕ್ಷಣ ಮತ್ತು ತಂತ್ರಜ್ಞಾನದಂತಹ ಸೂಕ್ಷ್ಮ ಮತ್ತು ರಾಷ್ಟ್ರ ನಿರ್ಮಾಣ ಕ್ಷೇತ್ರಗಳಲ್ಲಿ 25 ವರ್ಷಗಳ ಪ್ರಯಾಣ ಕೇವಲ ಕಾರ್ಪೊರೇಟ್ ಸಾಧನೆಯಲ್ಲ, ಇದು ಭಾರತದ ಅಭಿವೃದ್ಧಿ ಪ್ರಯಾಣಕ್ಕೆ ಮಹತ್ವದ ಕೊಡುಗೆಯಾಗಿದೆ. ಆವಿಷ್ಕಾರ ಪರಿಶ್ರಮ ಮತ್ತು ಸೇವೆಯ ಈ ಸ್ಫೂರ್ತಿದಾಯಕ ಪ್ರಯಾಣದಲ್ಲಿ ವಿಎಪಿಎಸ್ ಕುಟುಂಬಕ್ಕೆ ಅಭಿನಂದನೆಗಳು ಎಂದರು.

ಪ್ರಸ್ತುತ ಯುಗವು ವೈಜ್ಞಾನಿಕ ತೀವ್ರತೆ, ಡಿಜಿಟಲ್ ಕ್ರಾಂತಿ ಮತ್ತು ಜ್ಞಾನ ಆಧಾರಿತ ಆರ್ಥಿಕತೆಯಿಂದ ಗುರುತಿಸಲ್ಪಟ್ಟಿದೆ. ಈ ಪರಿವರ್ತನಾತ್ಮಕ ಕಾಲದಲ್ಲಿ, ಶಿಕ್ಷಣಿಕ ಮತ್ತು ಐಟಿ ವಲಯಗಳಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಲು ವಿಎಪಿಎಸ್ ಕೆಲಸ ಮಾಡುತ್ತಿದೆ. ಇದೊಂದು ಸಾಫ್ಟ್‌ವೇರ್ ಕಂಪನಿ ಮತ್ತು ಸಾಮಾಜಿಕವಾಗಿ ಉತ್ಪಾದಕ ಶೈಕ್ಷಣಿಕ ಪರಿಸರ ವ್ಯವಸ್ಥೆಗೆ ಶಕ್ತಿ ತುಂಬುವ ವೈಜ್ಞಾನಿಕ ಅಭಿವೃದ್ಧಿ ಎಂಜಿನ್ ಎರಡೂ ಆಗಿದೆ. ಶಾಲಾ ಮತ್ತು ಕಾಲೇಜು ಕ್ಯಾಂಪಸ್‌ಗಳನ್ನು ಡಿಜಿಟಲೀಕರಣಗೊಳಿಸುವ ಮೂಲಕ, ಬುದ್ಧಿವಂತ ಇಖಿಕ ವ್ಯವಸ್ಥೆಗಳನ್ನು ಸಂಯೋಜಿಸುವ ಮೂಲಕ ಮತ್ತು ಆಡಳಿತ ರಚನೆಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಸೇರಿಸುವ ಮೂಲಕ ವಿಎಪಿಎಸ್ ಶಿಕ್ಷಣ ಸಂಸ್ಥೆಗಳ ಆಡಳಿತಾತ್ಮಕ ಬೆನ್ನೆಲುಬನ್ನು ಬಲಪಡಿಸಿರುವ ಕಾರ್ಯ ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಆದಿಚುಂ ಚನಗಿರಿ ಮಠದ ಮಠಾಧೀಶ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ, ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಸುತ್ತೂರು ವೀರಸಿಂಹಾಸನ ಸಂಸ್ಥಾನ ಮಠದ ಮಠಾಧೀಶರು, ಲೋಕಾಯುಕ್ತ ನ್ಯಾ. ಬಿ.ಎಸ್. ಪಾಟೀಲ್ ಹಾಜರಿದ್ದರು.

Samyuktakarnataka Pg.4b

ಇಂಡಿ ನಿಂಬೆಗೆ ಪ್ರಧಾನಿ ಪ್ರಶಂಸೆ

ಸಂಸ್ಕರಣೆ, ಸಂರಕ್ಷಣೆಗೆ ಬೇಕಿದೆ ಬೂಸ್ಟ್। ವಿಸ್ತರಿಸಬೇಕಿದೆ ರಫ್ತು ಜಾಲ

■ ಉಮೇಶ ಕೋಳೇಕರ ಇಂಡಿ (ವಿಜಯಪುರ)
utkolekar@gmail.com

ವಿಶೇಷ ಪರಿಮಳ ಹೊಂದಿದ, ವಾರಗಟ್ಟಲೆ ಹೊರಗಿಟ್ಟರೂ ಕೆಡದ ಉತ್ಕೃಷ್ಟ ಗುಣಮಟ್ಟದ ಇಂಡಿ ಭಾಗದಲ್ಲಿ ಬೆಳೆಯುವ ಕಾಗ್ಜಿ ತಳಿಯ ನಿಂಬೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಮನ್ ಕಿ ಬಾತ್ ಬಾನುಲಿ ಕಾರ್ಯಕ್ರಮದಲ್ಲಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ 12 ಸಾವಿರ ಹೆಕ್ಟೇರ್‌ನಲ್ಲಿ ನಿಂಬೆ ಇದ್ದರೆ, ವಿಜಯಪುರ ಜಿಲ್ಲೆಯೊಂದರಲ್ಲಿ 8 ಸಾವಿರ ಹೆಕ್ಟೇರ್ ಪ್ರದೇಶ ಇಂಡಿ ತಾಲೂಕಿನಲ್ಲೇ 6 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತದೆ. ವಿಶಿಷ್ಟರುಚಿ, ಸ್ವಾದದ ಮೂಲಕ ಇಂಡಿಯ ಕಾಗ್ಜಿ ನಿಂಬೆಗೆ 2023ರಲ್ಲಿ ಜಿಐ ಟ್ಯಾಗ್ (ಜಾಗತಿಕ ಮನ್ನಣೆ) ಸಿಕ್ಕಿದ್ದೇ ತಡ, ದೇಶ-ವಿದೇಶಗಳಿಗೆ ರಫ್ತು ಜಾಲ ತೆರೆದುಕೊಂಡಿತು. ಆಲ್ಲದೆ, ನಿಂಬೆಗೆ ಮೌಲ್ಯವರ್ಧನೆ, ರೈತರಿಗೆ ಪೂರಕವಾಗಿ ನಿಂಬೆ ಅಭಿವೃದ್ಧಿ ಮಂಡಳಿಯೂ ಸ್ಥಾಪನೆಯಾಗಿದೆ. ವರ್ಷಪೂರ್ತಿ ಫಸಲು ಕೊಡುವ ನಿಂಬೆ ಬೆಳೆ ರೈತರಿಗೆ ಪರ್ಯಾಯ ಆದಾಯದ ಮಾರ್ಗವಾಗಿದೆ. ಹೀಗಾಗಿ ಕಾಗ್ಜಿನಿಂಬೆ ಬೆಳೆಯ ಕ್ಷೇತ್ರ ಹೆಚ್ಚಾಗಿದೆ.

ಸಹಿ ಮಾರಾಟ: ರಾಜ್ಯದ ಇತರೆ ಜಿಲ್ಲೆ, ಮಹಾರಾಷ್ಟ್ರ, ಆಂಧ್ರ, ತೆಲಂಗಾಣ, ತಮಿಳುನಾಡು, ಕೇರಳ ರಾಜ್ಯಗಳಿಂದಲೂ ಈ ನಿಂಬೆ ಸುಗಿ ಬೇಡಿಕೆ ಉಂಟಾಗಿದೆ. ಸಾಕಷ್ಟು ರೈತರು ಗುಂಪು ರಚಿಸಿಕೊಂಡು ತೋಟದಿಂದಲೇ ಕೂಲಿಂಗ್ ವ್ಯವಸ್ಥೆ ಮೂಲಕ ವಿದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಕೆಲ ರೈತರು ನಿಂಬೆ ಆಗಿ ಉತ್ಪಾದಿಸಿ ಆ ಮೂಲಕ ಆದಾಯ ಗಿಟ್ಟಿಸುತ್ತಿದ್ದಾರೆ. ಕಾಂಬಾ ಗ್ರಾಮದ ರೈತ ಬೀರಪ್ಪ ವಗ್ಗಿ ಅವರು ನಿಂಬೆ ಆಗಿ ಮಾರಾಟ ಮಾಡಿಯೇ ಕೋಟಿ ರೂ. ಆದಾಯ ಗಳಿಸಿದ್ದಾರೆ.

ಮೌಲ್ಯವರ್ಧನೆ: ನಿಂಬೆ ಹಣ್ಣಿಗೆ ಮೌಲ್ಯವರ್ಧನೆ ಮಾರ್ಗ ಕಂಡುಕೊಂಡ ಸ್ಥಳೀಯ ಗುಂಪುಗಳು ಸಂಸ್ಕರಣಾ ಘಟಕಗಳ ಮೂಲಕ ಉಪ್ಪಿನಕಾಯಿ, ಜಾಮ್, ಜೆಲ್ಲಿ, ಜ್ಯೂಸ್ ಮತ್ತಿತರ ಉಪ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿವೆ. ಆಲ್ಲದೆ, ನಿಂಬೆ ಅಭಿವೃದ್ಧಿ ಮಂಡಳಿಯಿಂದ ಲೆಮನ್ ಟೀ ಪಾಯಿಂಟ್‌ಗಳ ಸ್ಥಾಪನೆಯಾಗಿದೆ. ಕೆಲವರು ನಿಂಬೆಗೆ ದರ ಕುಸಿದಾಗ ಹಣ್ಣುಗಳನ್ನು ಒಣಗಿಸಿ ಕೊಲ್ಲಿ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದಾರೆ. ಆ ರಾಷ್ಟ್ರಗಳಲ್ಲಿ ಒಣಗಿದ ನಿಂಬೆಹಣ್ಣನ್ನು ಆಹಾರ ಪದಾರ್ಥಗಳಿಗೆ ಬಳಸಲಾಗುತ್ತಿದೆ.



ಮೋದಿ ಮೆಚ್ಚುಗೆ

ಬಾಂಗ್ಲಾದೇಶ, ನೇಪಾಳ, ದುಬೈ, ಅಬುದಾಬಿ, ಕುವೈತ್, ಶ್ರೀಲಂಕಾ, ಪಾಕಿಸ್ತಾನ, ಇಂಗ್ಲೆಂಡ್, ಆಸ್ಟ್ರೇಲಿಯಾ ಸೇರಿದಂತೆ ಅನೇಕ ದೇಶಗಳಿಗೆ ನಿಂಬೆ ರಫ್ತಾಗುತ್ತಿದೆ ಎಂದು ಪ್ರಧಾನಿ ಇಂಡಿ ನಿಂಬೆ ಕುರಿತು ಶ್ಲಾಘಿಸಿದ್ದಾರೆ. ಕಾಗ್ಜಿ ನಿಂಬೆಗೆ ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದ್ದಕ್ಕೆ ರೈತರಲ್ಲಿ ಸಂತಸ ಮಾಡಿದ್ದು, ನಿಂಬೆಹಣ್ಣಿಗೆ ದರ ಕುಸಿತ ಕಂಡಾಗ ಕೆಲವಿನ ಕೆಡದಂತೆ ಸಂರಕ್ಷಿಸಲು ಆಗತ್ಯ ಕೋಲ್ಡ್ ಸ್ಟೋರೇಜ್ ವ್ಯವಸ್ಥೆ, ಮಾರುಕಟ್ಟೆ ಜಾಲ ಬಲಿಷ್ಠಗೊಳಿಸಬೇಕು, ಹಾಗೆಯೇ ಜೂನ್ ತಿಂಗಳಿಂದ ಡಿಸೆಂಬರ್ ತನಕ ನಿಂಬೆ ದರ ಇಳಿಕೆಯಾಗುವುದರಿಂದ ಈ ಅವಧಿಯಲ್ಲಿ ಸರಕಾರ ನೆರವಿಗೆ ಬರಬೇಕೆಂದು ಆಗ್ರಹಿಸಿದ್ದಾರೆ.

Vijayakarnataka Pg.05

CUTTING-EDGE CUTS COSTS

AI makes Aland's sugarcane farmers aim high on yield

Real-time inputs from sensors help optimise resources

VITTAL SHASTRI
KALABURAGI, DHNS



The censor equipment installed in a sugarcane field in Tadakal village of Aland taluk in Kalaburagi district. It gives real-time inputs to farmers who have adopted AI and drip irrigation, to boost productivity.

The sugarcane growers in Tadakal and surrounding villages of Aland taluk have got almost double yield using Artificial Intelligence (AI).

Adopted for the first time in the state, this has enabled precision irrigation, reducing costs by 30-40%.

AI is guiding farmers on when and how much water and nutrients should be given to the crop. The growers have taken a cue from AI technology adopted in the sugarcane belt of Baramati in Maharashtra.

NSL Sugars is encouraging farmers cultivating on 500 acres of land under its purview by providing advance amount towards cultivation cost to them. The Krishi Vigyan Kendra (KVK) of Baramati and Microsoft are partnering in this initiative.

The farmers have incorporated IoT sensors — including soil moisture probes, flow meters, canopy and leaf-wetness monitors and GPS-based yield trackers—to enable precise, real-time field insights.

Complemented by AI-driven analytics, automated irrigation controls and optimised irrigation scheduling, these technologies support data-driven decisions and strengthen overall sustainability of the crop.

A weather station has been set up within the 3-km radius of the sugarcane fields and the censor equipment provide inputs to Microsoft company about climatic changes, rainfall indication, temperature, chances of sudden rainfall apart from monitoring moisture condition, temperature, nutrients, pests and crop growth through satellite.

KVK officials in Baramati send messages to the mobile phones of farmers through AI technology about pest attacks and water management by collecting these inputs.

The farmers claimed wastage of fertilisers can be avoided and productivity increased significantly by planting sugarcane with a spacing of six feet between rows instead of the normal three feet, which restricts air circulation and sunlight, leading to reduced yield.

Farmer Basavaraj Patil Koralli, who cultivated 18 acres and got an yield of 105 tonnes per acre, said planting sugarcane with a spacing of six feet enhances photosynthesis and improves sugar content in crop.

Water, fertilizer efficiency

Udaykumar Pavadashetty, a farmer from Tadakal village, who is a software engineer, said he has significantly improved water and fertilizer efficiency, resulting in nearly a 40% increase in sugarcane yield with implementation of a comprehensive drip irrigation system.

"To further enhance productivity, I am planning to adopt AI," he said.

The factory is planning to provide training and sensor-based equipment to farmers adopting AI-based cultivation. It is planning to increase area under cultivation with this technology.

"Use of AI will help save 30% water, 40% fertilisers and increase yield by 40%, supplying water and nutrients directly to the crop's root zone through drip irrigation," the factory's deputy general manager Ambrishi Kadam said.

NSL Sugars unit-2 chairman G R Chintala said the factory had decided to give 50% of the sugarcane cultivation cost as advance assistance to growers in the factory's command area.

Deccan Herald Pg.04

ಎಳನೀರಿಗೆ ಹೆಚ್ಚಿದ ಬೇಡಿಕೆ: ಬೆಲೆ ಏರಿಕೆ

ಬೆಂಗಳೂರು: ನಗರದಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತಾಪ ಹೆಚ್ಚಾಗುತ್ತಿದ್ದು, ತಂಪು ಪಾನೀಯಗಳು, ಎಳನೀರಿಗೆ ಬೇಡಿಕೆ ಹೆಚ್ಚಾಗಿದೆ. ಬಿಸಿಲು ಹೆಚ್ಚಾದಂತೆ ತಂಪು ಪಾನೀಯಗಳು, ಮಜ್ಜಿಗೆ, ಎಳನೀರಿಗೆ ಬೇಡಿಕೆ ಹೆಚ್ಚಿದ್ದು, ಬೆಲೆಯೂ ಗಗನಕ್ಕೇರುತ್ತಿದೆ. ಕಳೆದ ವರ್ಷದಿಂದಲೂ ಸಹ ಎಳನೀರಿನ ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಂಡಿದ್ದು, ಕಳೆದ ಕೆಲವು ತಿಂಗಳ ಹಿಂದೆ ತುಸು ಇಳಿದಿದ್ದ ಬೆಲೆ ಮತ್ತೆ ಏರಿಕೆಯಾಗಿದ್ದು, 50 ರಿಂದ 60 ರು.ಗೆ ಮಾರಾಟವಾಗುತ್ತಿದೆ. ಹವಾಮಾನ ವೈಪರೀತ್ಯ, ರೋಗಭಾದೆ, ಮಳೆಯ ಕೊರತೆ ಸೇರಿದಂತೆ ಮತ್ತಿತರ ಕಾರಣಗಳಿಂದ ಇಳುವರಿ ಕುಂಠಿತವಾಗಿ ಬೇಡಿಕೆ ಹೆಚ್ಚಾಗಿ ಬೆಲೆ ಏರಿಕೆಗೆ ಕಾರಣವಾಗಿದೆ. ಬೆಂಗಳೂರಿಗೆ ಮಂಡ್ಯ, ಮದ್ದೂರು, ಮೈಸೂರು, ತುಮಕೂರು, ರಾಮನಗರ, ಮಳವಳ್ಳಿ ಹಾಸನ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದ ಎಳನೀರು ಬರುತ್ತದೆ. ಗಾತ್ರ ಹಾಗೂ ಗುಣಮಟ್ಟಕ್ಕನುಗುಣವಾಗಿ ನಗರದಲ್ಲಿ ಎಳನೀರು ಮಾರಾಟವಾಗುತ್ತಿದ್ದು, ಉತ್ತಮ ಎಳನೀರು ಈಗಾಗಲೇ 50 ರು.ಗಳಿಂದ 60 ರು.ಗಳಿಗೆ ಮಾರಾಟವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ.

Vishwa Vani Pg.09

ಇ-ಕೆವೈಸಿ ಮಾಡಿಸಲು ಕೃಷಿ ಇಲಾಖೆ ರೈತರಿಗೆ ಸೂಚನೆ

• **ದೊಡ್ಡಬಳ್ಳಾಪುರ:** ಕೇಂದ್ರ ಸರ್ಕಾರದ ಹಣಕಾಸು ಸಚಿವಾಲಯದ ವೆಚ್ಚ ಇಲಾಖೆಯು ಆಗ್ರಿಸ್ಟಾಕ್ ಘಟಕದಲ್ಲಿ ಕೇಂದ್ರ ಸರ್ಕಾರದ ಮಾನದಂಡವನ್ನು ಅಳವಡಿಸಿ ಭೂಹಿಡುವಳಿ ಹೊಂದಿರುವ ರಾಜ್ಯದ ಎಲ್ಲಾ ರೈತರ ವಿವರಗಳನ್ನೊಳಗೊಂಡ ಸ್ಟೇಟ್ ಫಾರ್ಮರ್ ರಿಜಿಸ್ಟ್ರೀ ಸ್ಥಾಪಿಸಲು ಯೋಜಿಸಲಾಗಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದಿಂದ ಒಂದು ಕೇಂದ್ರ ನೋಂದಾಯಿತ ರೈತರ ಸಂಖ್ಯೆಯನ್ನು ಸೃಜಿಸಲಾಗುತ್ತದೆ, ಈ ರೀತಿಯಾಗಿ ಸೃಜಿಸಲಾದ ಕೇಂದ್ರ ನೋಂದಾಯಿತ ರೈತ ಸಂಖ್ಯೆಯನ್ನು ಕೇಂದ್ರ ಸರ್ಕಾರದಿಂದ ಅನುಗ್ಯಾನಗೊಳಿಸುವ ಪಿ.ಎಂ ಕಿಸಾನ್ ಸಮ್ಮಾನ ಯೋಜನೆಯು ಸೇರಿದಂತೆ ಎಲ್ಲಾ ಯೋಜನೆಗಳಲ್ಲೂ ಕಡ್ಡಾಯವಾಗಿ ಬಳಸಲಾಗುತ್ತದೆ. ಕೇಂದ್ರ ಸರ್ಕಾರದ ಪ್ರಮುಖ ಯೋಜನೆಗಳಾದ ಬರಪರಿಹಾರ, ಬೆಳೆ ವಿಮೆ, ಹಾಗೂ ಪಿ.ಎಂ ಕಿಸಾನ್ ಯೋಜನೆಯಡಿ ಸೌಲಭ್ಯಗಳನ್ನು ಪಡೆಯಲು ಕೇಂದ್ರ ನೋಂದಾಯಿತ ರೈತರ ಸಂಖ್ಯೆಯು ಕಡ್ಡಾಯವಾಗಿರುತ್ತದೆ. ಆದುದರಿಂದ ರೈತರು ಸಮೀಪದ ರೈತ ಸಂಪರ್ಕ ಕೇಂದ್ರ ,ಗ್ರಾಮ ಒನ್ ಕೇಂದ್ರ , ಕಂದಾಯ, ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆ,ಕಚೇರಿಗಳನ್ನು ತಮ್ಮ ಆಧಾರ್ ಕಾರ್ಡ್, ಆಧಾರ್ ಕಾರ್ಡ್‌ನೊಂದಿಗೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆ, ಬ್ಯಾಂಕ್ ಪಾಸ್ ಬುಕ್ ಜೆರಾಕ್ಸ್ ಹಾಗೂ ತಮ್ಮ ಹೆಸರಿನಲ್ಲಿರುವ ಎಲ್ಲಾ ಪಹಣಿಯನ್ನು ಇದೇ ಫೆಬ್ರವರಿ 26ರ ರೊಳಗಾಗಿ ಕಡ್ಡಾಯವಾಗಿ ಸಂಪರ್ಕಿಸಿ ಇ-ಕೆವೈಸಿ ಮಾಡಿಸುವುದು. ರೈತರ ವಿದ್ಯುನ್ಮಾನ ಸಹಮತಿ ಪತ್ರ ನೀಡುವುದು. ಎಲ್ಲಾ ಭೂ ಹಿಡುವಳಿಯನ್ನು ಎಫ್‌ಐಡಿಯಲ್ಲಿ ಸೇರ್ಪಡೆಗೊಳಿಸಿಕೊಳ್ಳಲು ಕೋರಲಾಗಿದೆ ತಪ್ಪಿದಲ್ಲಿ ಕೇಂದ್ರ, ರಾಜ್ಯ ಸರ್ಕಾರದ ಸೌಲಭ್ಯದಿಂದ ವಂಚಿತರಾಗುವರು ಎಂದು ಈ ಮೂಲಕ ತಿಳಿಸಿದೆ.

Hosa Diganta Pg.07

Unseasonal Feb rains sweep Gujarat, farmers fear massive crop damage

DILIP SINGH KSHATRIYA
@ Ahmedabad

FRESH showers lashed the Ankleshwar and Jambusar talukas of Bharuch district in Gujarat on Monday morning, extending the weather disturbance that began across several districts on February 20.

The sudden spell quickly altered the weather pattern in Gandhinagar, where slow drizzle cooled the atmosphere but simultaneously heightened agricultural anxiety.

As the drizzle persisted, concern deepened because the showers arrived at a critical agricultural window, when Rabi crops across Gujarat are either ready for harvesting or already being cut. This timing has intensified fears that even light rainfall could inflict disproportionate damage, especially to wheat, cotton, tur, and vegetable crops that are currently in the most vulnerable stage.

Farmers now worry that prolonged moisture could blacken grains, spoil quality, and trigger rotting of harvested produce lying in fields. The anxiety is sharper because the rain threatens key staple crops such as wheat, gram, tur, coriander, and cumin, which form the backbone of the season's output. If the drizzle turns into sustained showers, the soaked produce risks fungal infection, discoloration and reduced market value, directly impacting farm incomes.



Weather uncertainty keeps farmers on edge

Cloudy conditions continue to prevail across many rural pockets of the state, and the persistence of overcast skies has added a layer of uncertainty to farm planning, keeping farmers on edge.

The timing of the weather shock has added to the distress, as months of costly seeds, irrigation expenses and round-the-clock labour were invested precisely to secure a timely harvest. Compounding the crisis, farmers are also struggling to protect harvested crops and stock lying in open agricultural fields and marketing yards, where sudden rain can cause irreversible damage. This exposure means that even a brief spell can undo weeks of preparation, forcing hurried tarpaulin covers and emergency transport arrangements that escalate logistical stress.

Cattle owners face a parallel challenge, as soaked fodder could reduce feed quality, affecting livestock health.

Ind exp. Pg. 12

ತರಕಾರಿ ಜತೆಗೆ ಕಿಡ್ನಿ, ಮಿದುಳು ಸಮಸ್ಯೆ ಉಚಿತ!

ನಗರದ ತರಕಾರಿಗಳಲ್ಲಿ ಸೀಸದ ಅಂಶ ಪತ್ತೆ | ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ದೃಢ

• **ಕಚ್ಚದಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರು ನಗರ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಬೆಳೆಯುವ ತರಕಾರಿಗಳಲ್ಲಿ ಆಪಾಯಕಾರಿ ಭಾರಿ ಲೋಹವಾಗಿರುವ ಸೀಸದ ಅಂಶ ಮತ್ತು ಕ್ರಿಮಿನಾಶಕಗಳ ಅವಶೇಷಗಳು ಕಂಡು ಬಂದಿದ್ದು ಇವುಗಳನ್ನು ಸೇವಿಸಿದರೆ ಕಿಡ್ನಿ ಹಾಗೂ ಮಿದುಳು ಕಾಯಿಲೆ ಬರಲಿವೆ ಎಂಬ ಆಘಾತಕಾರಿ ಅಂಶ ಬೆಳಕಿಗೆ ಬಂದಿದೆ.

ನಗರದ ಅನೇಕ ತರಕಾರಿಗಳಲ್ಲಿ ಆಪಾಯಕಾರಿ ಅಂಶಗಳಿರುವ ಬಗ್ಗೆ ದೂರುಗಳು ಬಂದಿದ್ದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿತ್ತು. ಎನ್‌ಜಿಟಿ ನಿರ್ದೇಶನದಂತೆ ತರಕಾರಿಗಳ ಪರೀಕ್ಷೆ ನಡೆಸಲು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಣತರ ಸಮಿತಿಯನ್ನು ರಚಿಸಿತ್ತು.

ಈ ಸಮಿತಿಯ ಸದಸ್ಯರು ಬೆಂಗಳೂರು ನಗರ, ನೆಲಮಂಗಲ, ಚಿಕ್ಕಬಳ್ಳಾಪುರದ ವಿವಿಧ ಎಪಿಎಂಸಿಗಳು, ಹಾಪ್‌ಕಾಮ್ಸ್‌ಗಳು, ತರಕಾರಿ ಬೆಳೆಯುವ ಪ್ರದೇಶಗಳಿಂದ 72 ಮಾದರಿಯ ತರಕಾರಿಗಳನ್ನು ಸಂಗ್ರಹಿಸಿದ್ದರು. ಪರೀಕ್ಷೆಯ ಭಾಗವಾಗಿ ತೊಳೆಗಳಲ್ಲಿನ ಮಣ್ಣು ಮತ್ತು ಬೆಳೆಗಳಿಗೆ ಬಳಸುವ ಸಂಸ್ಕರಿತ ನೀರು, ಅಂತರ್ಜಲ ಕೂಡ ಸಂಗ್ರಹಿಸಿ ಎಫ್‌ಎಸ್‌ಎಲ್‌ಗೆ ಅಸಾದೋದಿತ ಪ್ರಯೋಗಾಲಯಗಳಲ್ಲಿ ಪರೀಕ್ಷೆ ನಡೆಸಲಾಗಿದೆ.

ಈ ವೇಳೆ ಬಯಕಾಯಿ, ಸೊಪ್ಪಿನಲ್ಲಿ ಸೀಸದಂತೆ ಅನೇಕ ತರಕಾರಿಗಳಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎ) ನಿಗದಿಪಡಿಸಿದ ಮಾನದಂಡಗಳನ್ನು ಮೀರಿ ಹಾನಿಕಾರಕ ಭಾರ ಲೋಹಗಳು ಪತ್ತೆಯಾಗಿವೆ.

72 ಮಾದರಿಗಳ ಪೈಕಿ 53 ಮಾದರಿಗಳನ್ನು ರಾಜಾಜಿನಗರ, ನೆಲಮಂಗಲ, ಕೋಲಾರ ಮಾರುಕಟ್ಟೆಗಳಿಂದ ಉಳಿದ ಮಾದರಿಯನ್ನು ನೆಲಮಂಗಲ, ಕೋಲಾರ ಮತ್ತು ಚಿಕ್ಕಬಳ್ಳಾಪುರದ ಹೊಲಗಳಿಂದ ಸಂಗ್ರಹಿಸಲಾಗಿತ್ತು. 72 ಮಾದರಿಗಳಲ್ಲಿ 19ರಲ್ಲಿ ನಿಗದಿಗಿತ ಹೆಚ್ಚು ಸೀಸದ ಅಂಶ ಕಂಡು ಬಂದಿದೆ.



ಮಣ್ಣು ಕೂಡ ಕಲುಷಿತ

ಸಮಿತಿಯು ಕೋಲಾರ, ಚಿಕ್ಕಬಳ್ಳಾಪುರ ಮತ್ತು ನೆಲಮಂಗಲದಲ್ಲಿನ ಹೊಲಗಳಿಂದ 23 ಮಾದರಿ ಮಣ್ಣು ಸಂಗ್ರಹಿಸಿ ಪರೀಕ್ಷೆ ನಡೆಸಿದ್ದು, ಅದು ಕೂಡ ಕಲುಷಿತಗೊಂಡಿದೆ ಎಂದು ವರದಿ ತಿಳಿಸಿದೆ. ತರಕಾರಿಗಳಲ್ಲಿ ಕಂಡು ಬಂದಿರುವ ಸೀಸ ಮತ್ತು ಕ್ರಿಮಿನಾಶಕ ಅವಶೇಷಗಳ ಉಗಮ ಎಲ್ಲಿಂದ ಮೂಲವೇನು. ನಿಯಮಾನುಸಾರ ತರಕಾರಿಗಳ ಪರೀಕ್ಷೆ ಮಾಡುತ್ತಿರಬೇಕು. ಆಪಾಯಕಾರಿ ಅಂಶಗಳು ತರಕಾರಿಗಳಲ್ಲಿ ಸೇರ್ಪಡೆಗೊಳ್ಳದಂತೆ ಕೈಗೊಳ್ಳಬೇಕಾದ ಕ್ರಮಗಳನ್ನು ಅನುಸರಿಸಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸಾಮಾನ್ಯ ತರಕಾರಿ ಎಂದು ಮಾರಾಟ ಮಾಡಲಾಗುತ್ತಿದ್ದ 1 ಕೆ.ಜಿ ಬದನೆಕಾಯಿಯಲ್ಲಿ 1.953 ಎಂ.ಜಿ ಸೀಸ ಕಂಡು ಬಂದಿದೆ. ಇದು ಎಫ್‌ಎಸ್‌ಎಸ್‌ಎ ನಿಗದಿಪಡಿಸಿದ್ದಕ್ಕಿಂತ20ಪಟ್ಟುಅಧಿಕ.ಕೊಂಡೆಕಾಯಿಯಲ್ಲಿ ಕಂಡು ಬಂದಿದೆ.

ಕ್ರಿಮಿನಾಶಕ ಪತ್ತೆ: ಕಿಡ್ನಿಗೆ ಅಪಾಯಕಾರಿ

ಬೆಳೆ ಬೆಳೆ ಮಾದರಿಯ 10 ತರಕಾರಿ ಮಾದರಿಗಳಲ್ಲಿ ಕ್ರಿಮಿನಾಶಕ ಅವಶೇಷಗಳು ಕಂಡು ಬಂದಿವೆ. ಉಳಿದ 60 ಮಾದರಿಗಳಲ್ಲಿ ನಿಗದಿಪಡಿಸಿದ್ದಕ್ಕಿಂತ ಕಡಿಮೆ ಇದೆ. ತರಕಾರಿಗಳಲ್ಲಿ ಕಾಣಬರುವ ಸೀಸದ ಅಂಶದಿಂದ ಮಾನವ ರಲ್ಲಿ ಆಸಾರೋಗ್ಯ ಸಮಸ್ಯೆ ಉಂಟಾಗುತ್ತದೆ. ಕಿಡ್ನಿ ವೈಫಲ್ಯ ಸೇರಿದಂತೆ ಇನ್ನಿತರ ಆಪಾದೋಗ್ಯ ಸಮಸ್ಯೆಗಳು ಎದುರಾಗುತ್ತವೆ ಎಂದು ಜಾಗತಿಕ ಆರೋಗ್ಯ ಸಂಸ್ಥೆಗಳು ಹೇಳಿವೆ.

- ನಗರದ ತರಕಾರಿಗಳಲ್ಲಿ ಆಪಾಯಕಾರಿ ಅಂಶಗಳಿರುವ ಬಗ್ಗೆ ಇನರ ದೂರು
- ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ
- ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ತರಕಾರಿಗಳ ಪರೀಕ್ಷೆ ನಡೆಸಿ ವರದಿ ಸಲ್ಲಿಕೆ
- ವರದಿಯಲ್ಲಿ ಆತಂಕಕಾರಿ ಅಂಶ ಬೆಳೆಗೆ ಬಂದಿದ್ದು ತರಕಾರಿ ಕಲುಷಿತ ಎಚ್ಚರಿಗೆ

18 ಪಟ್ಟು ಬೀನ್ಸ್‌ನಲ್ಲಿ 9 ಪಟ್ಟು ಸೀಸ ಕಂಡು ಬಂದಿದೆ. ಹುರಿದೆಗೆಸು ಹಾಗೂ ಕ್ಯಾಬೇಜ್‌ನಲ್ಲಿ ನಿಗದಿಪಡಿಸಿದ್ದಕ್ಕಿಂತ 5 ಪಟ್ಟು ಹೆಚ್ಚು ಸೀಸ, ಸೌತೆಕಾಯಿ, ದಪ್ಪ ಮೆಣಸಿನಕಾಯಿ, ಹಾಗಲಕಾಯಿ, ಬೀಟ್‌ರೂಟ್, ಬಜ್ಜಿ ಮೆಣಸಿನಕಾಯಿಯಲ್ಲೂಕೂಡ ಎಫ್‌ಎಸ್‌ಎಸ್‌ಎ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಸೀಸದ ಅಂಶ ಕಂಡು ಬಂದಿದೆ.

Kannada Prabha Pg.02